**<u>ಸಾಕ್ಷಿಯನ್ನು ದಿನಾಂಕ: 06-12-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ :- ಪ್ರತಿವಾದಿ ಪರ ವಕೀಲರಿಂದಃ</u>**

<u>ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ.</u>

1) ಮಾಹಿತಿ ಕೋರಿ ಸಲ್ಲಿಸಿದ ಅರ್ಜಿ.
2) ಜಿಲ್ಲಾಧಿಕಾರಿಗಳು ನೀಡಿದ್ದ ತಿಳುವಳಿಕೆ ಪತ್ರ.
3) ನಾನು ಸಲ್ಲಿಸಿದ್ದ ತಕರಾರು ಅರ್ಜಿ
4) ಜಿಲ್ಲಾಧಿಕಾರಿಗಳು ನೀಡಿರುವ ಹಿಂಬರಹ.
5) ನಾನು ವಾದಿಗೆ ಕಳುಹಿಸಿದ್ದ ನೋಟಿಸಿನ ಕಛೇರಿಯ ಪ್ರತಿ.
6) ನೋಟಿಸ್ ಜಾರಿಯಾದ ಬಗ್ಗೆ ಎರಡು ಅಂಚೆ ಸ್ವಿಕೃತಿ ಪತ್ರಗಳು.
7) ಜಿ.ಪಿ.ಎ ವಾಪಸ್ಸು ಪಡೆದ ಬಗ್ಗೆ ನೋಂದಣಿ ಮಾಡಿದ ಜಿ.ಪಿ.ಎ ವಾಪಸ್ಸಾತಿ ಪತ್ರದ ದೃಢೀಕೃತ ನಕಲು.
8) ಜಾರಿಯಾಗದೇ ಹಿಂದುರಿಗಿರುವ ಎರಡು ಅಂಚೆ ಕವರಗಳು.
9) ದಾವಾ ಆಸ್ತಿಯ ಒಂದು ಪಹಣಿ ಪತ್ರಿಕೆ, ಒಂದು ಕಂದಾಯ ಕಟ್ಟಿದ ರಶೀದಿ ಮತ್ತು ಒಂದು ರಶೀದಿ ಪಟ್ಟಾ.
10) ಉಪವಿಭಾಗಾಧಿಕಾರಿಗಳ ನ್ಯಾಯಾಲಯದ ಆದೇಶದ ದೃಢೀಕೃತ ನಕಲು.
11) ಕುಟುಂಬದ ವಂಶವೃಕ್ಷದ ಬಗ್ಗೆ ಒಂದು ನೋಟರಿ ಮಾಡಿದ ಪ್ರಮಾಣ ಪತ್ರ.
12) ದಾವಾ ಆಸ್ತಿಗೆ ಸಂಬಂಧಿಸಿದ 3 ಛಾಯಾ ಚಿತ್ರಗಳು ಮತ್ತು ಅದರ ಒಂದು ಸಿ.ಡಿ. ಹಾಜರು ಮಾಡಿರುತ್ತೇನೆ.

**ಸದರಿ ದಾಖಲೆಗಳನ್ನು ಕ್ರಮವಾಗಿ <u>ನಿಡಿ-1 ರಿಂದ ನಿಡಿ-16, ನಿಡಿ-9 ಮತ್ತು ನಿಡಿ-10 ರ ಒಳಗಿರುವ ನೋಟಿಸಿನ ಪ್ರತಿಗಳನ್ನು ನಿಡಿ-9(ಎ) ಮತ್ತು ನಿಡಿ-10(ಎ) ಮತ್ತು ಛಾಯಾ ಚಿತ್ರಗಳನ್ನು ನಿಡಿ-16(ಎ) ಯಿಂದ ನಿಡಿ-16(ಸಿ) ಎಂದು ಗುರುತಿಸಲಾಯಿತು</u>.** ಆದ್ದರಿಂದ ದಾವೆಯನ್ನು ಡಿಕ್ರಿ ಮಾಡುವಂತೆ ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲು :-</u>** ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**